ಈ ಬಗ್ಗೆ ಚಿಂತನೆಯನ್ನು ಮಾಡಬೇಕಾಗಿದೆ. ಈಗಾಗಲೇ ಎಸ್. ಆರ್. ರೇಟ್‌ಗಳು ಜಾಸ್ತಿ ಆಗಿರುವ ಹಿನ್ನೆಲೆಯೊಳಗೆ ಕಳೆದ ವರ್ಷ ಮಾಡಿರುವಂತಹ ಕಾಮಗಾರಿಗಳಿಗೆ ಗುತ್ತಿಗೆದಾರರು ನಷ್ಟಕ್ಕೆ ತುಂಬಾ ಗುರಿ ಆಗುತ್ತಾರೆ ಎಂಬ ಮಾತನ್ನು ಹೇಳುತ್ತಿದ್ದಾರೆ. ಹಾಗಾಗಿ ಇನ್ನು ಮುಂದೆ ಆಗುವಂತಹ ಕಾಮಗಾರಿಗಳಿಗೆ ಎಸ್.ಆರ್.ರೇಟನ್ನು ಕೊಡುವಾಗ ರಿವಿಜನ್ ರೇಟ್‌ನಲ್ಲಿ ಅವರಿಗೆ ಕೊಟ್ಟಾಗ ಮಾತ್ರ ಕೆಲಸವನ್ನು ಮಾಡುತ್ತೇವೆಂದು ಅವರು ಹೇಳುತ್ತಾರೆ. ಅದನ್ನು ಕೂಡ ರಿವಿಜನ್ ಮಾಡಿ ಕೊಡುವಂತೆ ತಮ್ಮ ಮೂಲಕ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, 12ನೇ, ಫೈನಾನ್ಸ್‌ನಲ್ಲೋ ಅಥವಾ ಸಿಆರ್‌ಎಫ್‌ನಲ್ಲೋ ಯಾವುದರಲ್ಲಾದರೂ ತೆಗೆದುಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನ ಪಡುತ್ತೇನೆ.

ವಿಷಯ:–ಬೀದರ್ ಜಿಲ್ಲೆಯಲ್ಲಿ ಎಂ.ಡಿ.ಆರ್. ಗಳನ್ನು ದುರಸ್ತಿ ಮಾಡುವ ಬಗ್ಗೆ.

137 (739) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ಬರುವ ಪ್ರಮುಖ ರಾಜ್ಯ ಹೆದ್ದಾರಿಗಳ ಸಂಖ್ಯೆ ಎಷ್ಟು (ಎಂ.ಡಿ.ಆರ್) ಇವು ಎಷ್ಟು ಕಿ.ಮೀ ಉದ್ದ ಇವೆ ಹಾಗೂ ಈ ಪೈಕಿ ಎಷ್ಟು ರಸ್ತೆಗಳು ಅಂತರ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಾಗಿವೆ ಜಿಲ್ಲೆಯ ಬಹುತೇಕ ಹೆದ್ದಾರಿಗಳು ಸಮರ್ಪಕವಾದ ನಿರ್ವಹಣೆ ಮತ್ತು ದುರಸ್ತಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯ ಯಾವ ಎಂ.ಡಿ.ಆರ್ ಗಳನ್ನು ದುರಸ್ಥಿ ಮಾಡಲಾಗುವುದು ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗುವುದು ಈಗ ಪ್ರಗತಿಯಲ್ಲಿರುವ ಅಂತರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳ ವಿವರಗಳೇನು?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ ಒಟ್ಟು 7 ಪ್ರಮುಖ ರಾಜ್ಯ ಹೆದ್ದಾರಿಗಳಿದ್ದು ಇವುಗಳ ಒಟ್ಟು ಉದ್ದ 476.99 ಕಿಮೀ ಹಾಗೂ ಒಟ್ಟು 58 ಎಂಡಿಆರ್ ಗಳಿದ್ದು ಇವುಗಳ ಒಟ್ಟು ಉದ್ದ 867.34 ಕಿಮೀ ಇರುತ್ತದೆ. ಈ ಪೈಕಿ 3 ರಾಜ್ಯ ಹೆದ್ದಾರಿಗಳನ್ನು 17 ಎಂಡಿಆರ್‌ಗಳು ಅಂತರ್ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುತ್ತವೆ. ರಾಜ್ಯ ಹೆದ್ದಾರಿಗಳನ್ನು 2005–08ನೇ ಸಾಲಿಗೆ 3 ವರ್ಷ ವಾರ್ಷಿಕ ನಿರ್ವಹಣೆಯಡಿಯಲ್ಲಿ ಕೆ.ಆರ್.ಡಿ.ಸಿ.ಎಲ್ ಮತಿಯಿಂದ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ. ಜಿಲ್ಲಾ ಮುಖ್ಯ ರಸ್ತೆಗಳನ್ನು ಪ್ರಸ್ತುತ ಸಾಲಿನಲ್ಲಿ ಲಭ್ಯವಿರುವ ಅನುದಾನದಲ್ಲಿ ನಿರ್ವಹಣೆ ಮತ್ತು ದುರಸ್ತಿ ಮಾಡಲಾಗುತ್ತದೆ.

ಆ) ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ಅನುದಾನ ಲಭ್ಯತೆ ಆಧರಿಸಿ ಜಿಲ್ಲಾ ಮುಖ್ಯ ರಸ್ತೆಗಳ ಅಂತರರಾಜ್ಯ ಸಂಪರ್ಕ ಕಲ್ಪಿಸುವ ರಸ್ತೆಗಳ ದುರಸ್ತಿ ಹಾಗೂ ಸುಧಾರಣೆ ಕೈಗೊಳ್ಳಲಾಗುವುದು. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಅನುಬಂಧ

ಲೋಕೋಪಯೋಗಿ ಇಲಾಖೆ ವಿಭಾಗದ ವ್ಯಾಪ್ತಿಯಲ್ಲಿನ ಅಂತರರಾಜ್ಯ ಸಂಪರ್ಕ ಕಲ್ಪಿಸುವ ರಸ್ತೆಗಳ ವಿವರ

ಕ್ರ ಸಂ.	ರಸ್ತೆಯ ವರ್ಗ	ರಸ್ತೆಯ ಹೆಸರು	ರಸ್ತೆಯ ಉದ್ದ	ರಸ್ತೆಯ ಈಗಿನ ಸ್ಥಿತಿ	ಅಭಿವೃದ್ಧಿಗೊಳಿಸಲು ಯೋಜಿಸಿರುವ ವಿವರ	ಅಭಿವೃದ್ಧಿಗೆ ಆಗಿರುವ ಅಂದಾಜು ಮೊತ್ತ (ರೂ.ಲಕ್ಷ ಗಳಲ್ಲಿ)	ಕಾಮಗಾರಿಯ ಭೌತಿಕ ಪ್ರಗತಿ	ವೆಚ್ಚ (ರೂ. ಲಕ್ಷ ಗಳಲ್ಲಿ)	ಷರಾ
1	2	3	4	5	6	7	8	9	10
1	ರಾಜ್ಯ ಹೆದ್ದಾರಿ	ಕಮಲಾನಗರ –ಗೂನಳ್ಳಿ ರಾಜ್ಯ ಹೆದ್ದಾರಿ ಸಂ.4	69.20	ಸದರಿ ರಸ್ತೆಯ 25.20 ಕಿಮೀ ರಸ್ತೆ ಸುಸ್ಥಿತಿಯಲ್ಲಿರುವುದು ಹಾಗೂ 44.00 ಕಿಮೀ. ನಷ್ಟು ಉದ್ದ ಶಿಥಿಲವಾಗಿದ್ದು ಸಂಚಾರಕ್ಕೆ ಅನಾನುಕೂಲವಾಗಿದೆ	2005–08ನೇ ಸಾಲಿಗಾಗಿ 3 ವರ್ಷಗಳ ನಿರ್ವಹಣೆ ಕೆಲಸ ಪ್ರಾರಂಭಿಸಲಾಗಿದೆ	227.60 ಲಕ್ಷ (ಕೆಆರ್‌ಡಿಸಿಎಲ್)	2005–08ನೇ ಅವಧಿಯಲ್ಲಿ ನಿರ್ವಹಣೆಯಡಿ 46 ಕಿಮೀನಲ್ಲಿ ಗುಂಡಿ ತುಂಬಲಾಗಿದೆ. ಮತ್ತು 4.50 ಕಿಮೀ ಉದ್ದದ ಭಾಗವನ್ನು ಮರು ಡಾಂಬರೀಕರಣ ಮಾಡಲಾಗಿದೆ.	ರೂ.25.00 ಲಕ್ಷ ಬಿಲ್ಲನ್ನು ಪಾವತಿಗಾಗಿ ಕೆಆರ್‌ಡಿಸಿ ಎಲ್‌ಗೆ ಸಲ್ಲಿಸಲಾಗಿದೆ.	ನರೆ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುತ್ತದೆ.

2	ರಾಜ್ಯ ಹೆದ್ದಾರಿ	ವನಮಾರಪಲ್ಲಿ ರಾಯಚೂರು ರಾಜ್ಯ ಹೆದ್ದಾರಿ ಸಂ.15	90.60	ಸದರಿ ರಸ್ತೆಯ ಸುಮಾರು 60.00 ಕಿಮೀ ಸುಸ್ಥಿತಿಯಲ್ಲಿದ್ದ ಉಳಿದ ಸುಮಾರು 30.6 ಕಿಮೀ ಉದ್ದ ರಸ್ತೆಯ ದುರಸ್ಥಿ ಮಾಡ ಬೇಕಾಗಿದೆ.	2005–08ನೇ ಸಾಲಿಗಾಗಿ 3 ವರ್ಷಗಳ ನಿರ್ವಹಣೆ ಕೆಲಸ ಪ್ರಾರಂಭಿಸಲಾಗಿದೆ	271.80 ಲಕ್ಷ (ಕೆಆರ್‌ಡಿಸಿ ಎಲ್)	ಕೆಆರ್‌ಡಿಸಿಎಲ್‌ನ ನಿರ್ವಹಣೆ ಅಡಿ ಸುಮಾರು 88 ಕಿಮೀ ಉದ್ದದ ರಸ್ತೆಯಲ್ಲಿ ಗುಂಡಿ ತುಂಬಿದ್ದು 20.00 ಕಿಮೀ ಮರು ಡಾಂಬರೀಕರಣ ಮಾಡಲಾಗಿದೆ.	ರೂ.55.00 ಲಕ್ಷ ಬಿಲ್ಲನ್ನು ಪಾವತಿಗಾಗಿ ಕೆಆರ್‌ಡಿಸಿ ಎಲ್‌ಗೆ ಸಲ್ಲಿಸಲಾಗಿದೆ.	ಮಹಾರಾಷ್ಟ್ರ ರಾಜ್ಯ ಹಾಗೂ ಗುಲ್ಬರ್ಗಾ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುತ್ತದೆ.
3	ರಾಜ್ಯ ಹೆದ್ದಾರಿ	ಹಲಸೂರು ಮಹಾಗಾಂವ್ ರಾಜ್ಯ ಹೆದ್ದಾರಿ ಸಂ.11	56.70	ಸದರಿ ರಸ್ತೆಯ ಸುಮಾರು 45.00 ಕಿಮೀ ಸುಸ್ಥಿತಿ ಯಲ್ಲಿದ್ದು ಉಳಿದ ಸುಮಾರು 11.70 ಕಿಮೀ ರಸ್ತೆಯನ್ನು ದುರಸ್ಥಿ ಮಾಡ ಬೇಕಾಗಿದೆ.	2005–08ನೇ ಸಾಲಿಗಾಗಿ 3 ವರ್ಷಗಳ ನಿರ್ವಹಣೆ ಕೆಲಸ ಪ್ರಾರಂಭಿಸಲಾಗಿದೆ	187.40 ಲಕ್ಷ (ಕೆಆರ್‌ಡಿಸಿ ಎಲ್)	ಕೆಆರ್‌ಡಿಸಿಎಲ್‌ನ ನಿರ್ವಹಣೆ ಅಡಿ ಸುಮಾರು 45.20 ಕಿಮೀ ಉದ್ದದ ರಸ್ತೆಯಲ್ಲಿ ಗುಂಡಿ ತುಂಬಿದ್ದು 6 ಕಿಮೀ ಮರು ಡಾಂಬರೀಕರಣ ಮಾಡಲಾಗಿದೆ.	ರೂ.15.00 ಲಕ್ಷ ಬಿಲ್ಲನ್ನು ಪಾವತಿಗಾಗಿ ಕೆಆರ್‌ಡಿಸಿ ಎಲ್– ಗೆ ಸಲ್ಲಿಸಲಾಗಿದೆ.	ಮಹಾರಾಷ್ಟ್ರ ರಾಜ್ಯ ಹಾಗೂ ಗುಲ್ಬರ್ಗಾ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುತ್ತದೆ.

		ಒಟ್ಟು	216.50	216.50 (ಸುಸ್ಥಿತಿ 130.20 (ದುಸ್ಥಿತಿ 86.30)	686.80 ಲಕ್ಷ ನಿರ್ವಹಣೆಗಾಗಿ	686.80			
4	ಜಿಲ್ಲಾ ಮುಖ್ಯ ರಸ್ತೆ	ಸಂತಮೂರು–ನಾರಾಯಣ ಬೇಡ	18.80	12.00 ಕಿಮೀ ನಷ್ಟು ಉದ್ದದ ರಸ್ತೆಯು ಸುಸ್ಥಿತಿಯಲ್ಲಿದ್ದು ಉಳಿದ ಸುಮಾರು 6.80 ಕಿಮೀ ದುರಸ್ತಿ ಮಾಡಬೇಕಾಗಿದೆ.	2004–05ನೇ ಸಾಲಿಗೆ ರೂ.1.90 ಲಕ್ಷದ ಅಂದಾಜು ವೆಚ್ಚದಲ್ಲಿ ಗುಂಡಿ ಮುಚ್ಚಲಾಗಿದೆ	ಸುಮಾರು ರೂ.15.00 ಲಕ್ಷಗಳ ಅಂದಾಜಿನಲ್ಲಿ 3054 ಯೋಜನೆಯಡಿ 3.00 ಕಿ.ಮೀ ಹಾಗೂ 5054ಯಡಿ 3.60 ಕಿಮೀ ನಷ್ಟು ಉದ್ದದ ರಸ್ತೆಯನ್ನು ಸುಧಾರಣೆ ಕ್ರಮ ಕೈಗೊಳ್ಳಲಾಗಿದೆ.	3054 ರಡಿಯಲ್ಲಿ 8 ಕಿಮೀ ಸುಧಾರಣೆ ಕೆಲಸ ಪೂರ್ಣಗೊಂಡಿದೆ. ಮತ್ತು 5054 ರಡಿಯಲ್ಲಿ ಸರ್ಫೇಸ್ ಡ್ರೆಸ್ಸಿಂಗ್ ಕೆಲಸ ಪ್ರಗತಿಯಲ್ಲಿದೆ.	15.00 (3054)	
5	ಜಿಲ್ಲಾ ಮುಖ್ಯ ರಸ್ತೆ	ಚಿಂತಾಕಿ–ನಾಗನಪಲ್ಲಿ	27.20	ಸುಮಾರು 20.00 ಕಿಮೀ ನಷ್ಟು ಉದ್ದದ ರಸ್ತೆಯು ಸುಸ್ಥಿತಿಯಲ್ಲಿದ್ದು ಸುಮಾರು 7.20 ಕಿಮೀ	ಸುಮಾರು 3.20 ಲಕ್ಷ ಅಂದಾಜು ವೆಚ್ಚದಲ್ಲಿ ಗುಂಡಿ ಮುಚ್ಚಲಾಗಿದೆ	ಸುಮಾರು ರೂ.1.00 ಲಕ್ಷಗಳ ಅಂದಾಜಿನಲ್ಲಿ 3054 ರಡಿ ಹಾಗೂ 2.50 ಕಿಮೀ ಉದ್ದ ರಸ್ತೆ ಸುಧಾರಣೆ ಕೈಗೊಳ್ಳಲಾಗಿದೆ.	3054 ರಡಿಯಲ್ಲಿ 2.50 ಕಿಮೀ ಸುಧಾರಣೆ ಕೆಲಸ ಪೂರ್ಣಗೊಂಡಿದೆ.	15.00 (3054)	

				ರಸ್ತೆಯ ದುರಸ್ತಿ ಮಾಡ ಬೇಕಾಗಿರುತ್ತದೆ					
6	ಜಿಲ್ಲಾ ಮುಖ್ಯ ರಸ್ತೆ	ಮುರ್ಕಿ ಗಡಿಯಿಂದ ಕರಂಜಿ ಗಡಿಯ ವರೆಗಿನ ರಸ್ತೆ	56.80	20.00 ಕಿಮೀ ಉದ್ದದ ರಸ್ತೆಯು ಸುಸ್ಥಿತಿ ಯಲ್ಲಿದ್ದು, ಉಳಿದ ರಸ್ತೆಯ ಸುಧಾರಣೆ ಮಾಡಬೇಕಾಗಿ ರುತ್ತದೆ.	2004–05ನೇ ಸಾಲಿನಲ್ಲಿ ರೂ.8.40 ಲಕ್ಷದ ಅಂದಾಜು ವೆಚ್ಚದಲ್ಲಿ ಗುಂಡಿ ತುಂಬಲಾಗಿದೆ.	3054 ರಡಿ ರೂ.10.00 ಲಕ್ಷಗಳಲ್ಲಿ ಸುಮರು 11.00 ಕಿಮೀ ಸಿಆರ್‌ಎಫ್ ಅಡಿ ರೂ.40.00 ಲಕ್ಷದಲ್ಲಿ 55 ಕಿಮೀ ಮತ್ತು 5054 ರಡಿ ರೂ.4.00 ಲಕ್ಷದಲ್ಲಿ 2.00 ಕಿಮೀ ನಷ್ಟು ರಸ್ತೆಯ ಸುಧಾರಣೆಗೆ ಕ್ರಮ ಕೈಗೊಳ್ಳಲಾಗಿದೆ.	3054 ರಡಿಯಲ್ಲಿ 10 ಕಿಮೀ ಕೆಲಸ ಹಾಗೂ ಸಿಆರ್‌ಎಫ್ ಕಾಮಗಾರಿ ಪೂರ್ಣಗೊಂಡಿದೆ. 5054 ಅಡಿಯಲ್ಲಿ ಕೆಲಸಗಳು ಪ್ರಗತಿಯಲ್ಲಿವೆ.	50.00 (3054 ಮತ್ತು ಸಿ ಆರ್ ಎಫ್)
7	ಜಿಲ್ಲಾ ಮುಖ್ಯ ರಸ್ತೆ	ಎಕ್ಸಂಬಾ–ಮುರ್ಕಿ ಗಡಿ ರಸ್ತೆ	17.40	10.00 ಕಿಮೀ ಉದ್ದದ ರಸ್ತೆಯು ಸುಸ್ಥಿತಿ ಯಲ್ಲಿದ್ದು ಉಳಿದ ರಸ್ತೆಯ ಸುಧಾರಣೆ ಮಾಡಬೇಕಾಗಿ ರುತ್ತದೆ.	2004–05ನೇ ಸಾಲಿನಲ್ಲಿ ರೂ.2.20 ಲಕ್ಷದ ಅಂದಾಜು ವೆಚ್ಚದಲ್ಲಿ ಗುಂಡಿ ತುಂಬಲಾಗಿದೆ.	3054 ರಡಿ ರೂ. 20.00 ಲಕ್ಷಗಳ ಅಂದಾಜಿನಲ್ಲಿ ಸುಮಾರು 3.20ಕಿಮೀ ನಷ್ಟು ರಸ್ತೆಯ ಸುಧಾರಣೆಗೆ ಕ್ರಮ ಕೈಗೊಳ್ಳಲಾಗಿದೆ.	3054 ರಡಿ 3.20 ಕಿಮೀ ಉದ್ದದ ಸುಧಾರಣೆ ಕೆಲಸವು ಪೂರ್ಣಗೊಂಡಿದೆ.	13.00 (3054)

8	ಜಿಲ್ಲಾ ಮುಖ್ಯ ರಸ್ತೆ	ಭಾಲ್ಕಿ–ನೀಲಂಗಾ ರಸ್ತೆ	21.20	15.00 ಕಿಮೀ ಉದ್ದದ ರಸ್ತೆಯು ಸುಸ್ಥಿತಿ ಯಲ್ಲಿದ್ದು ಉಳಿದ ರಸ್ತೆಯ ಸುಧಾರಣೆ ಮಾಡಬೇಕಾಗಿ ರುತ್ತದೆ.	2004–05ನೇ ಸಾಲಿನಲ್ಲಿ ರೂ.4.30 ಲಕ್ಷದ ಅಂದಾಜು ವೆಚ್ಚದಲ್ಲಿ ಗುಂಡಿ ತುಂಬಲಾಗಿದೆ	5054 ರಡಿ ರೂ.34.ಲಕ್ಷಗಳ ಅಂದಾಜಿನಲ್ಲಿ ಸುಮಾರು 6.00 ಕಿಮೀ ನಷ್ಟು ರಸ್ತೆಯ ಸುಧಾರಣೆಗೆ ಕ್ರಮ ಕೈಗೊಳ್ಳಲಾಗಿದೆ.	5054 ರಡಿ ಕೆಲಸವು ಪ್ರಗತಿಯಲ್ಲಿದೆ.	
9	ಜಿಲ್ಲಾ ಮುಖ್ಯ ರಸ್ತೆ	ಬೀದರ್–ಸುಲ್ತಾನಪುರ	8.20	3.00 ಕಿಮೀ ಉದ್ದದ ರಸ್ತೆಯು ಸುಸ್ಥಿತಿ ಯಲ್ಲಿದ್ದು ಉಳಿದ ರಸ್ತೆಯ ಸುಧಾರಣೆ ಮಾಡಬೇಕಾಗಿ ರುತ್ತದೆ.	2004–05ನೇ ಸಾಲಿನಲ್ಲಿ ರೂ.0.90 ಲಕ್ಷದ ಅಂದಾಜು ವೆಚ್ಚದಲ್ಲಿ ಗುಂಡಿ ತುಂಬಲಾಗಿದೆ.	3054 ರಡಿ ರು. 48.50 ಲಕ್ಷಗಳ ಅಂದಾಜಿನಲ್ಲಿ ಸುಮಾರು 5.00 ಕಿಮೀ ನಷ್ಟು ರಸ್ತೆಯ ಸುಧಾರಣೆಗೆ ಕ್ರಮ ಕೈಗೊಳ್ಳಲಾಗಿದೆ.	3054 ರಡಿ ಕೆಲಸವು ಪ್ರಗತಿಯಲ್ಲಿದೆ.	20.00 (3054)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ಎಂಡಿಆರ್ ನಲ್ಲಿ ಬರತಕ್ಕಂಥ ರಸ್ತೆಗಳು ಯಾವ್ಯಾವುದು ಎಂದು ಕೇಳಿದ್ದೆ. ಅದರಲ್ಲಿ ಏನಾಗಿದೆ ಎಂದರೆ, ಇವರು ದುಡ್ಡು ಖರ್ಚಾಗಿದೆ ಎಂದು ಹೇಳುತ್ತಾರೆ. ರಾಯಚೂರು, ವನಮಾರಪಳ್ಳಿ ರಾಯಚೂರು ರಸ್ತೆ, ರಾಜ್ಯ ಹೆದ್ದಾರಿ. ಆಮೇಲೆ ಕಮಾಲ್ ನಗರ ಗುನ್ನಹಳ್ಳಿ ರೋಡ್, ಈ ರೊಡ್‌ನಲ್ಲಿ ಎಷ್ಟು ದುಡ್ಡು ಖರ್ಚಾಗಿದೆ ಎಂದು ಹೇಳುತ್ತಾರೆ. ಅಷ್ಟು ದುಡ್ಡು ಖರ್ಚಾಗಿದೆ. ಆದರೆ ರೋಡೇ ಆಗಿಲ್ಲ. ಅಲ್ಲಿ ಗುಂಡಿಗಳು ಬಿದ್ದಿವೆ, ಓಡಾಡುವುದಕ್ಕೆ ಆಗುವುದಿಲ್ಲ. ರಸ್ತೆಗಳಲ್ಲಿ ಮನುಷ್ಯರು ಓಡಾಡುವ ಪರಿಸ್ಥಿತಿಯಲ್ಲಿಲ್ಲ. ಅದು ಮಹಾರಾಷ್ಟ್ರ ಗಡಿ ಭಾಗಕ್ಕೆ ಹೋಗತಕ್ಕಂಥದ್ದು. ಆ ಕಡೆಯಿಂದ ಮಹಾರಾಷ್ಟ್ರದಿಂದ ಜನ ಏನು ಬರುತ್ತಾರೆ, ಅವರು ಮಹಾರಾಷ್ಟ್ರದ ರಸ್ತೆವರೆಗೆ ಸರಿ ಇರುತ್ತಾರೆ; ಕರ್ನಾಟಕಕ್ಕೆ ಬಂದ ತಕ್ಷಣ ಎಚ್ಚರ ಆಗುತ್ತದೆ. ಎಚ್ಚರ ಆದ ತಕ್ಷಣ ಕರ್ನಾಟಕ ಬಂತು ಎಂದು ಹೇಳುತ್ತಾರೆ. ಈ ಮಾತನ್ನು ಅವರು ಭಾಷಣದಲ್ಲಿ ಬಂದು ಹೇಳಿದ್ದಾರೆ. ಎಲ್ಲಾ ಗಡಿ ಭಾಗದಲ್ಲೂ ಹೀಗೆ. ಕರ್ನಾಟಕಕ್ಕೆ ಬಂದ ತಕ್ಷಣ ಎಚ್ಚರ ಆಗುತ್ತದೆ. ಏಕೆಂದರೆ ದೊಡ್ಡ ದೊಡ್ಡ ಗುಂಡಿ ಇರುತ್ತವೆ ಅಲ್ಲಿ ಹೋಗಿ ಬಿದ್ದು ಬಿಡುತ್ತವೆ. ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಓಡಾಡಿಸಿಕೊಂಡು ಬರಬೇಕು ಒಂದು ಗುಂಡಿ ತಪ್ಪಿಸಿ ಇನ್ನೊಂದು ಗುಂಡಿಗೆ ಬಿದ್ದರೆ ಮತ್ತೊಂದು ಗುಂಡಿ ಇರುತ್ತದೆ ಒಂದು ರಸ್ತೆಯಲ್ಲಿ ಕೂಡ ನಾವು ಮನುಷ್ಯರು ನಡೆಯತಕ್ಕಂಥ ರೋಡುಗಳು ಇಲ್ಲ, ಸಾಕಾಗಿ ಹೋಗಿದೆ. ಕೆಟ್ಟ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಗಡಿ ಭಾಗದ ಎಲ್ಲಾ ರಸ್ತೆಗಳಲ್ಲೂ ಹೀಗೆಯೇ ಇದೆ. ತಾವು ಎಷ್ಟು ರಸ್ತೆಗಳನ್ನು ಕೊಟ್ಟಿದ್ದೀರಿ ಚಿಂತಾಕಿ ನಾಗನಪಲ್ಲಿ ಮುರ್ಕಿ ಗಡಿಯಿಂದ ಕರಂಜಿಗಡಿ ರಸ್ತೆ, ಸಂತ್‌ಮರ್‌ನಿಂದ ನಾರಾಯಣ್‌ಖೇಡ್ ರಸ್ತೆ, ಇವೆಲ್ಲಾ ಆಂಧ್ರಪ್ರದೇಶ್ ಮತ್ತು ಮಹಾರಾಷ್ಟ್ರಕ್ಕೆ ಮುಟ್ಟುವುವು. ಮತ್ತೆ ಹೊನ್ನಮಾರಪಲ್ಲಿಯಿಂದ ರಾಯಚೂರು ರಸ್ತೆ, ಈ ಎಲ್ಲಾ ರಸ್ತೆಗಳಲ್ಲೂ ಯಾವುದೇ ಕೆಲಸಗಳಾಗುತ್ತಿಲ್ಲ. ಅದು ಏನು, ಎಷ್ಟು ಖರ್ಚಾಗಿದೆ ಎಂದು ಅವರು ಹೇಳುತ್ತಿದ್ದಾರೆ. ಕೆಲವು ಕಂಟ್ರಾಕ್ಟರ್‌ಗಳಿಗೆ ಕೊಟ್ಟರೆ, ಮೂರು ವರ್ಷಗಳ ಕಾಲ ಅವರಿಗೆ ಮೇಂಟನೆನ್ಸ್ ಕೊಟ್ಟಿದ್ದೀರಿ. ಎರಡು ವರ್ಷಗಳಾದರೂ ಅವರು ಮೇಂಟನೆನ್ಸ್ ಮಾಡಿಲ್ಲ. ಈ ಮೂರು ವರ್ಷಗಳಲ್ಲಿ ಮಣ್ಣು ಹಾಕಿ ಅವರು ನಿಮ್ಮ ಹತ್ತಿರ ದುಡ್ಡು ಎತ್ತುತ್ತಿದ್ದಾರೆ. ಇನ್ನೊಂದು, ಯಾರಿಗೆ ನೀವು ಕಂಟ್ರಾಕ್ಟ್ ಕೊಟ್ಟಿದ್ದೀರಿ, ಕೆಲವು ಕಂಟ್ರಾಕ್ಟ್ ತೆಗೆದುಕೊಂಡಾಗ ಅವರಿಗೆ ಏನು ಕಂಡಿಷನ್ ಹಾಕಿರುತ್ತಾರೆಂದು ನಮಗೆ ಗೊತ್ತಾಗುವುದಿಲ್ಲ. ಅವರು ನಾಲ್ಕು ವರ್ಷಗಳಾದರೂ ಮಾಡುವುದಿಲ್ಲ. ಅವರಿಗೆ ಮಿನಿಮಮ್ ಏನು ದಂಡ ಹಾಕುತ್ತಿದ್ದೀರಿ, ದಂಡ 15 ಪರ್ಸೆಂಟ್, ಎಷ್ಟೋ ಇದೆಯಂತೆ. ಅದು ನನಗೆ ಗೊತ್ತಿಲ್ಲ. ವರ್ಷಕ್ಕೆ ದಂಡ 76 ಸಾವಿರ ರೂಪಾಯಿಗಳಾಗುತ್ತದೆ. ಅಷ್ಟು ಹಣವನ್ನು ಅವರು ಸುಲಭವಾಗಿ ಕೊಡುತ್ತಾರೆ. ಮತ್ತೊಂದು ವರ್ಷಕ್ಕೆ ಏನು ಮಾಡುತ್ತಾರೆಂದರೆ, ಡಬಲ್ ಬಿಲ್ ಮಾಡಿ ಎಸ್ಟಿಮೇಟ್ ಮಾಡಿ ದುಡ್ಡು ತೆಗೆದುಕೊಳ್ಳುತ್ತಾರೆ. ಈ ರೀತಿ ಸುಮಾರು 20 ಲಕ್ಷ 30 ಲಕ್ಷ ರೂ ತೆಗೆದುಕೊಳ್ಳುತ್ತಾರೆ. ಅವರು ದಂಡವೆಂದು 76 ಸಾವಿರ ರೂಪಾಯಿಗಳನ್ನು ಸುಲಭವಾಗಿ ಕೊಡುತ್ತಾರೆ. ಅವರು ನಮಗೆ ದಂಡ ಕೊಡುವುದು ಬೇಕಾಗಿಲ್ಲ. ನಮಗೆ ರಸ್ತೆ ಬೇಕು. ಅದರ ಸಲುವಾಗಿ ತಾವೇನು ಕ್ರಮ ಕೈಗೊಳ್ಳುತ್ತೀರಿ? ಜನರು ತಿರುಗಾಡಲು ಮಾಡಿರುವಂತಹ ಒಂದು ರಸ್ತೆಯೂ ಚೆನ್ನಾಗಿಲ್ಲ. ಬೀದರ್ ಜಿಲ್ಲೆಯಲ್ಲಿ ಯಾವುದೇ ರಸ್ತೆ ನೋಡಿದರೂ ಎಂಡಿಆರ್ ರಸ್ತೆಯಲ್ಲಿ ಓಡಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ, ತಾವು ಇದರ ಬಗ್ಗೆ ಏನು ಕ್ರಮ

ಕೈಗೊಳ್ಳುತ್ತೀರಿ? ಇನ್ನೊಂದು, ಕಳೆದ ಸಲ ನಾನು ತಮಗೆ ಕೇಳಿದೆ. ರಾಜ್ಯ ಹೆದ್ದಾರಿ ಇದೆ. ದೊಡ್ಡ ರಸ್ತೆ ಮಾಡಿದ್ದೀರಿ. ಅದನ್ನು ಸೌಬಾದ್‌ನಿಂದ ಜಿರಾದ್‌ವರೆಗೆ ಮಾಡಿದರೆ, ಹೊನ್ನಮಾರಪಲ್ಲಿವರೆಗೆ ಬಂದು ಮುಟ್ಟುತ್ತದೆ. 48 ಕಿಲೋಮೀಟರ್‌ಗಳಷ್ಟು ತಾವು ಎಸ್ಟಿಮೇಟ್ ಮಾಡಿದ್ದೀರಿ. ಅದು 48 ಕೋಟಿ ರೂಪಾಯಿಗಳಾಗಿತ್ತು. ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆಂದು ಹೇಳಿದಿರಿ. ಇವೊತ್ತಿನವರೆಗೂ ಕಳುಹಿಸಿಲ್ಲ. ಅದನ್ನು ಏನು ಮಾಡಿದ್ದೀರಿ? ತಾವು ಸ್ಪಷ್ಟವಾಗಿ ಇದರ ಬಗ್ಗೆ ನಿರ್ದಿಷ್ಟವಾಗಿ ಉತ್ತರಿಸಬೇಕು. ಈ ಕಂಟ್ರಾಕ್ಟರ್‌ಗಳನ್ನು ಬಲಿ ಹಾಕಬೇಕು. ಇವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಸುತ್ತೀರಾ? ಅಥವಾ ಅವರಿಗೆ ಏನು ಮಾಡುತ್ತೀರೆಂಬುದನ್ನು ಉತ್ತರಿಸಬೇಕು.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಅದನ್ನು ಕೇಂದ್ರ ಸರ್ಕಾರಕ್ಕೆ ಅಂತರ್ ರಾಜ್ಯ ರಸ್ತೆ ಏನಿದೆ, ಅದರಡಿಯಲ್ಲಿ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಆ ರಸ್ತೆಯನ್ನು ಕೇಂದ್ರ ಸರ್ಕಾರದಿಂದ ಮಾಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಅಲ್ಲದೆ, ತಮ್ಮ ಜಿಲ್ಲೆಯಲ್ಲಿ ಏನು ಏಳು ಪ್ರಮುಖ 476 ಕಿಲೋಮೀಟರ್‌ಗಳಷ್ಟು ರಾಜ್ಯ ಹೆದ್ದಾರಿಗಳಿವೆ, ಇದಕ್ಕೆ ಈಗಾಗಲೇ ರಸ್ತೆ ನಿಗಮದಿಂದ ದುರಸ್ತಿಗೆ ಮೂರು ವರ್ಷಗಳಿಗೆ ಟೆಂಡರ್ ಕರೆದಿದ್ದೇವೆ. ಅದರಲ್ಲೇನಾದರೂ ಲೋಪವಿದ್ದರೆ, ಅದನ್ನು ನನಗೆ ಕೊಟ್ಟರೆ, ಅದರ ಬಗ್ಗೆ ತನಿಖೆ ಮಾಡಿಸಿ ಯಾರೇ ಕಂಟ್ರಾಕ್ಟರ್ ಇರಲಿ, ಅವರ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಲೋಪವೆಂದು ನಾನು ಹೇಳುತ್ತಿಲ್ಲ. ಏನು ಹೇಳುತ್ತಿರುವುದೇನೆಂದರೆ, ಅವರಿಗೆ ಏನು ಕಂಟ್ರಾಕ್ಟ್ ಕೊಡುತ್ತೀರಿ, ಅವರು ಕಂಟ್ರಾಕ್ಟ್ ತೆಗೆದುಕೊಳ್ಳುತ್ತಾರೆ. ಅವರಿಗೆ ಒಂದು ವರ್ಷ, ಆರು ತಿಂಗಳು ಇಲ್ಲವೇ ಇಂತಿಷ್ಟು ದಿವಸದೊಳಗೆ ಮಾಡಬೇಕೆಂದು ಕಂಡಿಷನ್ ಇರಬೇಕಲ್ಲ ಮತ್ತು ಆ ಕಂಡಿಷನ್ ಅನ್ನು ಅವರು ಪೂರೈಸುವುದಿಲ್ಲ. ಕಂಡಿಷನ್ ಪ್ರಕಾರ ಮಾಡಲಿಲ್ಲವೆಂದರೆ ದಂಡ ಹಾಕುತ್ತೀರಿ. ದಂಡವೆಂದು 76 ಸಾವಿರ ರೂಪಾಯಿ ಕೊಡುತ್ತಾರೆ. ಆನಂತರ, ಎಸ್ಟಿಮೇಟ್ ಅನ್ನು ಡಬಲ್ ಮಾಡಿ ತೆಗೆದುಕೊಳ್ಳುತ್ತಾರೆ. ಇದು ಹೋಗಬೇಕು. ಅವರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಹಾಕುತ್ತೀರಾ? ಎಷ್ಟು ಕಂಟ್ರಾಕ್ಟರ್‌ಗಳಿಗೆ ಕೊಟ್ಟಿದ್ದೀರಿ? ಅಂತಹ ಎಷ್ಟು ಜನರಿದ್ದಾರೆ? ನಿಮ್ಮ ಬಳಿ ಲಿಸ್ಟ್ ಇದೆಯೇ? ತಾವೇನಾದರೂ ಮಾಡಿ ಈ ರೀತಿ ಮಾಡುತ್ತಿರುವ ಕಂಟ್ರಾಕ್ಟರ್‌ಗಳ ವಿರುದ್ಧ ಕ್ರಮ ಕೈಗೊಳ್ಳಲು ವ್ಯವಸ್ಥೆ ಮಾಡುತ್ತೀರಾ? ಹೇಳಬೇಕು.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸದಸ್ಯರು ಏನು ಕೆಲವು ಎಕ್ಸ್‌ಟ್ರಾ ಐಟಂ ಕೊಡುತ್ತಾರೆ, ನಿಯಮಾವಳಿಗಳಿಗೆ ವಿರುದ್ಧವಾಗಿ ಮಾಡುತ್ತಾರೆಂದು ಏನು ಹೇಳುತ್ತಿದ್ದಾರೆ, ಅಂತಹುದೇನಾದರೂ ತಮ್ಮ ಗಮನಕ್ಕೆ ಬಂದಲ್ಲಿ, ಅದನ್ನು ಕೊಟ್ಟಲ್ಲಿ, ರಸ್ತೆ ನಿಗಮದ ಕಾನೂನು ಏನಿದೆ, ಅದರ ವ್ಯಾಪ್ತಿಯಲ್ಲಿ ಕ್ರಮ ಜರುಗಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಹೊನ್ನಮಾರಪಲ್ಲಿಯಿಂದ ಜಿರಾದ್‌ವರೆಗೆ ಮೇಜರ್ ರೋಡ್ ಮಹಾರಾಷ್ಟ್ರಕ್ಕೆ ಹೋಗಿ ಮುಟ್ಟುತ್ತದೆ, ಅದು ನಾಗಪುರ್‌ಗೆ ಹೆದ್ದಾರಿಯಾಗುತ್ತದೆ. ಅದಕ್ಕೆ 48 ಕೋಟಿ ರೂಪಾಯಿಗಳಾಗುತ್ತದೆಂದು ಹೇಳಿದ್ದಾರೆ. ಇವೊತ್ತಿನವರೆಗೂ ಆಗಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ: 50 ಕೋಟಿ ರೂಪಾಯಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಕಳುಹಿಸಿಕೊಟ್ಟಿದ್ದೇವೆ. ಕೇಂದ್ರ ಸರ್ಕಾರದ ಕಡೆಯಿಂದ ಈಗಾಗಲೇ ಒಂದು ರೀಚ್ ತೆಗೆದುಕೊಂಡಿದ್ದೇವೆ. ಟೆಂಡರ್ ಎಲ್ಲವೂ ಆಗಿ ಕೇಂದ್ರ ಸರ್ಕಾರದಿಂದ ಬರಬೇಕಾದರೆ ಎಷ್ಟು ದಿವಸಗಳು ಬೇಕೆಂದು ತಾವೇ ಹೇಳಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಆ ರಸ್ತೆ ಸರಿ ಇಲ್ಲ, ಈ ರಸ್ತೆ ಸರಿ ಇಲ್ಲ, ಅದಕ್ಕೆ ದುಡ್ಡು ಬಂದಿಲ್ಲವೆಂದು ಏನೂ ಹೇಳುವುದಿಲ್ಲ. ಹಾಸನ, ಹೊಳೆನರಸೀಪುರ ರಸ್ತೆಗಳನ್ನು ಇಟ್ಟಂತೆ ನಮ್ಮೆಲ್ಲಾ ಊರುಗಳಲ್ಲಿರುವ ರಸ್ತೆಗಳನ್ನು ಇಟ್ಟುಬಿಡಿ ಸಾಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಹಾಗೆ ಮಾಡಿಕೊಟ್ಟರೆ ಸಾಕು.

ಶ್ರೀ ಕೆ.ಆರ್.ರಮೇಶ್‌ಕುಮಾರ್: ನಿಮ್ಮ ಊರು, ನಿಮ್ಮ ಜಿಲ್ಲೆ ಇಟ್ಟಂತೆ ನಮ್ಮೆಲ್ಲಾ ಊರು ಜಿಲ್ಲೆಗಳನ್ನಿಟ್ಟರೆ, ಎಲ್ಲರ ಬೇಡಿಕೆಗಳೂ ನೆರವೇರಿದಂತಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ರಮೇಶ್‌ಕುಮಾರ್‌ರವರು ಬಂದು ನಮ್ಮ ಹೊಳೆನರಸೀಪುರದ ರಸ್ತೆಗಳನ್ನು ನೋಡಲಿ. ಅವು ಚೆನ್ನಾಗಿದೆಯೆಂದು ನೀವು ಹೇಳಿದರೆ ನೀವು ಏನು ಹೇಳುತ್ತೀರೋ, ಅದಕ್ಕೆ ಭಾಗಿಯಾಗುತ್ತೇನೆ. ಹೊಳೆನರಸೀಪುರದ ರಸ್ತೆಯನ್ನು ನಾವು ಇನ್ನೂ ಚೆನ್ನಾಗಿ ಮಾಡಿಸುವುದಕ್ಕಾಗಿಲ್ಲ. ಬೇಕಿದ್ದರೆ, ಮಾನ್ಯ ರಾಮಸ್ವಾಮಿ ಅವರನ್ನು ಕೇಳಿ. ನಮ್ಮ ತಾಲ್ಲೂಕಿಗೆ ಎರಡು ರಸ್ತೆಗಳನ್ನು ಇವೊತ್ತಿನವರೆಗೂ ಮಂಜೂರಾತಿ ಮಾಡುವುದಕ್ಕಾಗಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಆವರ ರಸ್ತೆಗಳು ಯಾವ ಸ್ಥಿತಿಯಲ್ಲಿದೆಯೋ ಆ ತರಹ ಮಾಡಿಸಿದರೆ ಸಾಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಆಯಿತು, ಬೇರೇನೂ ಬೇಕಾಗಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ನೀವು ಸುಮ್ಮನೆ ಹೊನ್ನಮಾರಪಲ್ಲಿ, ಇನ್ನೊಂದು, ಮತ್ತೊಂದು ಕೇಳುತ್ತಿದ್ದೀರಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಬೇಡ. ಹಾಸನದಲ್ಲಿರುವ ರಸ್ತೆಗಳ ಸ್ಥಿತಿಯಂತೆ ನಮ್ಮ ರಸ್ತೆಗಳನ್ನೂ ಮಾಡಿಕೊಡಿ ಸಾಕು.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ನಿಮ್ಮದು ಪಕ್ಕದ ಕ್ಷೇತ್ರ, ಆ ಕ್ಷೇತ್ರವನ್ನು ನೀವು ನೋಡಿಕೊಂಡು ಬಂದು ನಮ್ಮ ರಾಜ್ಯದಲ್ಲೆಲ್ಲಾ ಅಷ್ಟು ಮಾತ್ರ ಮಾಡಿದರೆ ಸಾಕು ಇನ್ನೇನೂ ಮಾಡುವುದು ಬೇಕಾಗಿಲ್ಲ.

ಅಧ್ಯಕ್ಷರು: ಈಗ ಎಲ್ಲಾ ಅದೇ ತರಹ ಮಾಡಿಕೊಡುತ್ತೇವೆಂದು ಒಪ್ಪಿಕೊಂಡಿದ್ದಾರಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ರಮೇಶ್‌ಕುಮಾರ್‌ರವರ ಮಾತನ್ನು ನಾನು endorse ಮಾಡುತ್ತೇನೆ.

ಅಧ್ಯಕ್ಷರು: ಎಲ್ಲಾ ತಾಲ್ಲೂಕು, ಎಲ್ಲಾ ಕಾನ್‌ಸ್ಟಿಟ್ಯೂಯೆನ್ಸಿ ರಸ್ತೆಗಳನ್ನು ಚೆನ್ನಾಗಿ ಮಾಡಿಕೊಡುವುದು ಪಿಡಬ್ಲ್ಯೂಡಿ ಮಂತ್ರಿಗಳ ಜವಾಬ್ದಾರಿ. ಆ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆಂದು ನಾನು ಅವರ ಪರವಾಗಿ ಈ ಸದನಕ್ಕೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಡಿ.ಆರ್.ಪಾಟೀಲ್: ಕೆಪಿಸಿಯಲ್ಲಿ ಎಸ್ಕಲೇಶನ್ ಕ್ಲಾಸ್ ಅನ್ನು ಹೇಗೆ ತೆಗೆದುಹಾಕಿದ್ದಾರೊ, ಹಾಗೆ ಪಿಡಬ್ಲ್ಯೂಡಿಯಲ್ಲೂ ಕಂಟ್ರಾಕ್ಟ್‌ಗೆ ಸಂಬಂಧಿಸಿದಂತೆ ಎಸ್ಕಲೇಶನ್ ಕ್ಲಾಸ್ ತೆಗೆದುಹಾಕಲು ನಿಮಗೇನು ತೊಂದರೆ?

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅದನ್ನು ಪರಿಶೀಲನೆ ಮಾಡಿ ಹೇಳುತ್ತೇನೆ.

ಕಿತ್ತೂರು ಮತಕ್ಷೇತ್ರದಲ್ಲಿ ರಸ್ತೆಗಳ ಅಭಿವೃದ್ಧಿಗೆ ಹಣ ಮಂಜೂರಾತಿ

148 (558) ಶ್ರೀ ಸುರೇಶ್. ಎಸ್.ಮಾರಿಹಾಳ್ : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಿತ್ತೂರು ಮತ ಕ್ಷೇತ್ರದಲ್ಲಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳು ತುಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ ಅವುಗಳ ಸುಧಾರಣೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ: (ಲೋಕೋಪಯೋಗಿ ಇಲಾಖೆ ಸಚಿವರು)

ಅ) ಕಿತ್ತೂರು ಮತಕ್ಷೇತ್ರದಲ್ಲಿ ತುಂಬಾ ಹದಗೆಟ್ಟಿರುವ ಯಾವುದೇ ಲೋಕೋಪಯೋಗಿ ಇಲಾಖೆ ರಸ್ತೆಗಳು ಇರುವುದಿಲ್ಲ.

ಆ) ರಾಜ್ಯ ಹೆದ್ದಾರಿಗಳನ್ನು 2005–08ನೇ ಸಾಲಿಗೆ 3 ವಾರ್ಷಿಕ ನಿರ್ವಹಣೆ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಅಭಿವೃದ್ಧಿಪಡಿಸಲಾಗುತ್ತಿದೆ. ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ಇಲಾಖಾ ವತಿಯಿಂದ ತಗ್ಗುಗುಂಡಿಗಳನ್ನು ಮುಚ್ಚಿ ವಾಹನ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಸುರೇಶ್ ಎಸ್.ಮಾರಿಹಾಳ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರಗಳನ್ನು ಒದಗಿಸಿದ್ದಾರೆ. ಆದರೆ, 5054 ಮತ್ತು 3054 ಇದು ಸ್ಯಾಂಕ್ಷನ್ ಆಗಿದ್ದರೂ ಕಂಟ್ರಾಕ್ಟರ್ ಇಲ್ಲವೆಂದು ಈ ಕೆಲಸ ಮಾಡುವುದನ್ನು ಬಿಟ್ಟಿದ್ದಾರೆ. ಇದರ ಸಲುವಾಗಿ ಸಂಬಂಧಪಟ್ಟ ಮಂತ್ರಿಗಳು ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಅವರು ಕರೆಕ್ಟಾಗಿ ಕೇಳಲಿಲ್ಲ. ದಯಮಾಡಿ ಮತ್ತೊಮ್ಮೆ ಹೇಳಬೇಕು.

ಶ್ರೀ ಸುರೇಶ್ ಎಸ್.ಮಾರಿಹಾಳ್: ಮಾನ್ಯ ಅಧ್ಯಕ್ಷರೆ, ನಮ್ಮ ಮತಕ್ಷೇತ್ರದಲ್ಲಿ ಬರತಕ್ಕಂಥ ಪಿಡಬ್ಲ್ಯೂಡಿ ರಸ್ತೆಗಳಿಗೆ ಸಂಬಂಧಿಸಿದಂತೆ 5054 ಮತ್ತು 3054 ಈ ಕಾಮಗಾರಿಗಳು ಆಗಿಲ್ಲ. ಇದರ ಸಲುವಾಗಿ ಉತ್ತರ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, 12ನೇ ಹಣಕಾಸು ಆಯೋಗದಲ್ಲಿ 5054ನಲ್ಲಿ ಯಾವುದಾದರೂ ಹಣಕಾಸು ನೆರವು ಕೊಟ್ಟರೆ, ಹಣಕಾಸು ಲಭ್ಯತೆ ಆಧಾರದ ಮೇಲೆ ಆ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಗದಗಜಿಲ್ಲೆ ಕಪ್ಪತ್ ಗುಡ್ಡದಲ್ಲಿ ಗಣಿಗಾರಿಕೆಗೆ ಅನುಮತಿ ನೀಡಿರುವುದು

138 (561) ಶ್ರೀ ಪಾಟೀಲ್ ಎಸ್.ಎಸ್. ಮುಂಡರಗಿ: ಮಾನ್ಯ ಮುಖ್ಯಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?